ಶ್ರೀ ಚೌಡರೆಡ್ಡಿ(ಚಿಂತಾಮಣಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರದಲ್ಲಿ ಹರಿಜನ ಗಿರಿಜನ ಜಮೀನು ಮಂಜೂರು ಮಾಡಲು ಖಾಸಗಿಯವರಿಂದ ಖರೀದಿ ಮಾಡಿ ವಿತರಿಸಲು ಬಂದಿರುವ ಅರ್ಜಿಗಳೆಷ್ಟು;

ಆ) ಈ ಪೈಕಿ ಎಷ್ಟು ಅರ್ಜಿ ಯಲೇವಾರಿಯಾಗಿದೆ; ಇದಕ್ಕಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಇ) ವೈಯಕ್ತಿಕ ಕೊಳವೆಬಾವಿಗಳಿಗಾಗಿ ಬಂದಿರುವ ಅರ್ಜಿಗಳು ಎಷ್ಟು; ಎಷ್ಟು ಮಂಜೂರಾಗಿದೆ ಎಷ್ಟರ ತಿಳಿಸುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) 2000-01ರಲ್ಲಿ 09 ಅರ್ಜಿಗಳು ಬಂದಿರುತ್ತವೆ.

ಆ) ಈ ಪೈಕಿ 7 ಅರ್ಜಿಗಳು ಮಂಜೂರಾಗಿವೆ. ಹಾಗೂ ರೂ.2,82,946.00 ಹಣ ಬಿಡುಗಡೆ ಮಾಡಲಾಗಿದೆ.

ಇ) 2000-01ನೇ ಸಾಲಿನಲ್ಲಿ 30 ಅರ್ಜಿಗಳು ಬಂದಿದ್ದು 3 ಗುರಿ ಇದ್ದು 3 ಕೊಳವೆಬಾವಿಗಳನ್ನು ಕೊರೆಯಲಾಗಿದೆ. 2001-02ನೇ ಸಾಲಿನಲ್ಲಿ ವೈಯಕ್ತಿಕ ಕೊಳವೆಬಾವಿ ಯೋಜನೆಯಡಿ 15 ಪರಿಶಿಷ್ಟ ಜಾತಿ ಮತ್ತು 5 ಪರಿಶಿಷ್ಟ ವರ್ಗಕ್ಕೆ ಗುರಿ ಇದ್ದು 95 ಅರ್ಜಿಗಳು ಬಂದಿವೆ.

ಚಿಂತಾಮಣಿ ಕ್ಷೇತ್ರದ ಚೀಳೂರು ಹೋಬಳಿ ವೆಂಕಟ್ಯಗಾರಿಹಳ್ಳಿಯಲ್ಲಿರುವ ಹಕ್ಕಿಪಿಕ್ಕಿ ಜನಾಂಗದವರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.

1935(2461)

ಶ್ರೀ ಚೌಡರೆಡ್ಡಿ(ಚಿಂತಾಮಣಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಚೀಳೂರು ಹೋಬಳಿ ವೆಂಕಟ್ಯಗಾರಿಹಳ್ಳಿಯಲ್ಲಿ ಹಕ್ಕಿ-ಪಿಕ್ಕಿ ಕಾಲೋನಿಯಿದ್ದು ಸಮಾಜದ ಈ ಹಿಂದುಳಿದ ಜನಾಂಗದವರಿಗೆ ಮೂಲಭೂತ ಸೌಕರ್ಯಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ

ಬಂದಿದೆಯೆ;

ಅ) ಹಕ್ಕಿ-ಪಿಕ್ಕಿ ಜನಾಂಗದವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು 1998ರಿಂದ ಈವರೆವಿಗೂ ಸರ್ಕಾರದಿಂದ ಯಾವುದಾದರೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆಯೆ:

ಇ) ಈ ಕುರಿತು ಮಾಹಿತಿಯನ್ನು ನೀಡುವುದು.

ಶ್ರೀ ಕಾಗೋಡು ತಿಮ್ಮಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) ಹೌದು, ಈ ಕಾಲೋನಿಯ ಜನರಿಗೆ ಕನಿಷ್ಟ ಮೂಲಭೂತ ಸೌಲಭ್ಯಗಳಾದ ರಸ್ತೆ ಮತ್ತು ಮನೆಗಳನ್ನು ಒದಗಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಇ) ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ

1) ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಬಾಗೇಪಲ್ಲಿ ತಾಲ್ಲೂಕು ಚೇಳೂರು ಹೋಬಳಿಯ ಪಮ್ಮಯ್ಯಗಾರಿಪಲ್ಲಿ ಹಕ್ಕಿ-ಪಿಕ್ಕಿ ಕಾಲೋನಿಯ ರಸ್ತೆ ಅಭಿವೃದ್ಧಿ ಕಾಮಗಾರಿಗೆ ರೂ.17.50 ಲಕ್ಷಗಳನ್ನು 1998-99ರಲ್ಲಿ ವಿನಿಯೋಗಿಸಲಾಗಿದೆ.

2) ಚೇಳೂರು ಹೋಬಳಿಯಲ್ಲಿ 24 ಮನೆಗಳ ನಿರ್ಮಾಣಕ್ಕೆ ಪ್ರತಿ ಮನೆಗ ತಲಾ ರೂ.20,000.00ದಂತೆ ರೂ.4.80 ಲಕ್ಷಗಳನ್ನು 1998-99ನೇ ಸಾಲಿನಲ್ಲಿ ನೀಡಲಾಗಿದೆ.

ಕಡದಲಮರಿ ಗ್ರಾಮದಲ್ಲಿನ ವಿದ್ಯಾರ್ಥಿನಿಲಯದ ಕಟ್ಟಡದ ಕಾಮಗಾರಿ.

1936(2490)

ಶ್ರೀ ಚೌಡರೆಡ್ಡಿ(ಚಿಂತಾಮಣಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡದಲ ಮರಿ ಗ್ರಾಮದ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ಕಟ್ಟಡ ಪೂರ್ಣಗೊಂಡಿದ್ದು ಇಲಾಖೆಗೆ ವಹಿಸಿಕೊಟ್ಟಿದ್ದಾಗ್ಯೂ ವಿದ್ಯಾರ್ಥಿನಿಲಯವನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?